# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ 20 ಗಂಗಾನಗರ.ಬೆಂಗಳೂರು.**

**ಸಂಖ್ಯೆ: ಸ.ಅ/ವಾ-20/ಪಿ.ಆರ್/07/2022-23** **ದಿನಾಂಕ:-06-08-2022**

## ವಾರ್ಡ್ ಸಮಿತಿ ಸಭೆಯ ನಡವಳಿಗಳು

**ವಿಷಯ:-**ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/2020-21 ದಿನಾಂಕ: 21-09-2020. ರವರ ಆದೇಶದಂತೆ ದಿನಾಂಕ: 06-08-2022 ರಂದು ವಾರ್ಡ್ ನಂ:20, 3ನೇ ಕ್ರಾಸ್, 108 ಬಸ್ ನಿಲ್ದಾಣದ ಹತ್ತಿರ ಹೆಚ್.ಎಂ.ಟಿ ಬಡಾವಣೆ ಗಂಗಾನಗರ, ಬೆಂಗಳೂರು ರಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

### ::ಸಭೆಗೆ ಹಾಜರಾಗಿದ್ದವರ ವಿವರಗಳು::

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ |
|---|---|---|
| 1. | ಶ್ರೀ.ಸಿ.ಅಪ್ಪುರಾಜ್ | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು |
| 2. | ಶ್ರೀ.ಮೋಹನ್ ಕುಮಾರ್ | ಸದಸ್ಯ ಕಾರ್ಯದರ್ಶಿ ಮತ್ತು ಸಹಾಯಕ ಅಭಿಯಂತರರು ವಾಡ್ ನಂ: 20 |
| 3. | ಕಿಶೋರ್‌ಗೌಡ.ಎಸ್ ಪಾಟೀಲ್ | ಸಹಾಯಕ ಅಭಿಯಂತರರು (ಕಿಯಾನಿಕ್ಸ್), ವಾರ್ಡ್-20 |
| 4. | ಶ್ರೀ. ಕೃಷ್ಣಮೂರ್ತಿ ಬಿ.ಎಂ | ಕಿರಿಯ ಅಭಿಯಂತರರು (ಬೆಸ್ಕಾಂ) |
| 5. | ಶ್ರೀ.ಮೊಹಮ್ಮದ್ ಶರೀಫ್ | ಎ.ಎಸ್.ಐ ಕಾನೂನು ಮತ್ತು ಸುವ್ಯವಸ್ಥೆ |
| 6. | ಶ್ರೀಮತಿ ಸತ್ಯ ಶೀಲಾ | ಪಿ.ಹೆಚ್.ಸಿ.ಓ ಗಂಗಾನಗರ. |
| 7. | ಶ್ರೀಮತಿ ಶಾಯಿದಾ | ಹಿರಿಯ ಆರೋಗ್ಯ ಪರಿವೀಕ್ಷಕರು |
| 8. | ಶ್ರೀ. ಜೀವನ್‌ಗೌಡ | ಕಿರಿಯ ಆರೋಗ್ಯ ಪರಿವೀಕ್ಷಕರು |
| 9. | ಶ್ರೀ. ಸೋಮಶೇಖರ್ | ಬಿ.ಬಿ.ಎಂ.ಪಿ ಮಾರ್ಷಲ್ |
| 10. | ಶ್ರೀ. ಆನಂದ್ ಪಿ.ಸಿ | ಬೀದಿ ದೀಪಗಳ ನಿರ್ವಹಣೆ, ಬಿ.ಬಿ.ಎಂ.ಪಿ |
| 11. | ಶ್ರೀಮತಿ ಡಾ.ಶಾಲೀನಿ ದೇಶಪಾಂಡೆ | ಸಾರ್ವಜನಿಕರು |
| 12. | ಶ್ರೀ. ಶ್ರೀನಿವಾಸ್. | ಸಾರ್ವಜನಿಕರು |
| 13. | ಶ್ರೀ. ಎಂ.ಆರ್.ಪ್ರಸಾದ್ | ಸಾರ್ವಜನಿಕರು |
| 14. | ಶ್ರೀಮತಿ ವಿಜಯಾ ವಿ ಗೌಡ | ಸಾರ್ವಜನಿಕರು |
| 15. | ಶ್ರೀ.ಬಿಂಗಿ ಭೀಮಣ್ಣ | ಸಾರ್ವಜನಿಕರು |
| 16. | ಶ್ರೀ.ಪಿ.ವಿ.ಜಗನ್ನಾಥ್ ರಾವ್ | ಸಾರ್ವಜನಿಕರು |
| 17. | ಶ್ರೀ.ಎಂ.ಮುನಿಯಪ್ಪ | ಸಾರ್ವಜನಿಕರು |
| 18. | ಶ್ರೀ.ಮಸೂದ್ | ಸಾರ್ವಜನಿಕರು |

ವಾರ್ಡ್ ಕಾರ್ಯದರ್ಶಿಗಳಾದ ಶ್ರೀ ಮೋಹನ್‌ಕುಮಾರ್ ರವರು ಸಭೆಗೆ ಹಾಜರಾದ ಅಧ್ಯಕ್ಷರು, ಹಾಗೂ ನೋಡಲ್ ಅಧಿಕಾರಿಗಳಾದ ಶ್ರೀ.ಸಿ.ಅಪ್ಪುರಾಜ್ ರವರಿಗೆ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು. ಹಾಗೂ ಅಧ್ಯಕ್ಷರಿಗೆ ವಾರ್ಡ್ ಸಭೆ ಸಾರ್ವಜನಿಕರ ಕುಂದು ಕೊರತೆಗಳ ಬಗ್ಗೆ ವಿಸ್ತಾರವಾಗಿ ಮಾತನಾಡಲು ಕೋರಲಾಯಿತು.

1. ವಾರ್ಡ್‌ನ ಉದ್ಯಾನವನಗಳಲ್ಲಿರುವ ಮಕ್ಕಳು ಆಡುವ ಆಟದ ಸಾಮಾನುಗಳು ದುರಸ್ಥಿಗೊಂಡಿದ್ದು, ಅವುಗಳನ್ನು ಸರಿಪಡಿಸಲು ತೋಟಗಾರಿಕಾ ಇಲಾಖೆ ರವರಿಗೆ ಸಾರ್ವಜನಿಕರು ಕೋರಿಕೊಂಡರು.
2. ವಾರ್ಡ್‌ನಲ್ಲಿರುವ ಉದ್ಯಾನವನಗಳಿಗೆ ಯೋಜನಾವಿಭಾಗದಿಂದ ಬಂದಿರುವ ಅನುದಾನದಲ್ಲಿ ಆಗಿರುವ ಕಾಮಗಾರಿಗಳ ಬಗ್ಗೆ ಸಾರ್ವಜನಿಕರು ವಿವರಣೆಯನ್ನು ಕೋರಿದರು.
3. ವಾರ್ಡ್‌ನ ಹೆಚ್.ಎಂ.ಟಿ ಬಡಾವಣೆಯಲ್ಲಿರುವ ಉಡುಪಿ ಹೋಟೆಲ್ ಮತ್ತು ಸುಮಾರು ಹೋಟೆಲ್‌ಗಳಿಂದ ಬರುವ ಕೊಳಚೆ ನೀರನ್ನು ನಿಲ್ಲಿಸುವಂತೆ ಹಾಗೂ ಹೆಚ್.ಎಂ.ಟಿ ಬಡಾವಣೆಯಲ್ಲಿನ ಸೀವೇಜ್ ಪೈಪ್‌ಲೈನ್ ಬದಲಾಯಿಸಲು ಸಾರ್ವಜನಿಕರು ಮನವಿ ಮಾಡಿಕೊಂಡರು.
4. 2022–23ನೇ ಸಾಲಿನ ನವನಗರೋತ್ಥಾನ ಅನುದಾನದ ಯೋಜನೆಗಳ ಕಾಮಗಾರಿಗಳ ವಿವರಣೆಗಳನ್ನು ವಾರ್ಡ್ ಕಛೇರಿಯ ಸೂಚನಾ ಫಲಕದಲ್ಲಿ ಪ್ರದರ್ಶಿಸಲು ವಾರ್ಡ್‌ನ ಸಾರ್ವಜನಿಕರು ಕೋರಿದರು.
5. ಆರ್.ಟಿ ನಗರ ಮುಖ್ಯ ರಸ್ತೆ ಹಾಗೂ ಸಿ.ಬಿ.ಐ ಮುಖ್ಯರಸ್ತೆ ಜಂಕ್ಷನ್‌ನಲ್ಲಿರುವ ಬಿ.ಡಿ.ಎ ನಾಮಫಲಕವನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳುವಂತೆ ವಾರ್ಡ್‌ನ ಸಾರ್ವಜನಿಕರು ಕೋರಿದರು.
6. ಶ್ರೀ.ಬಿಂಗಿ ಭೀಮಣ್ಣನವರು ವಾರ್ಡ್‌ನಲ್ಲಿ ಕಾರ್ಮಿಕರ ಮೇಳವನ್ನು ಹಮ್ಮಿಕೊಳ್ಳಲು ಕೋರಿಕೊಂಡರು.
7. ಗಂಗಾನಗರ ಆಸ್ಪತ್ರೆಗೆ ಖಾಯಂ ವೈದ್ಯರನ್ನು ನೇಮಿಸುವಂತೆ ಸಾರ್ವಜನಿಕರು ಕೋರಿದರು.
8. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಮೇಲೆ ಆಗುತ್ತಿರುವ ದೌರ್ಜನ್ಯಗಳ ಬಗ್ಗೆ ಜಾಗೃತಿ ಮೂಡಿಸಲು ಪೊಲೀಸ್ ಇಲಾಖೆಯವರು ಜಾಗೃತಿ ಕಾರ್ಯಕ್ರಮ ನಡೆಸಲು ಸಾರ್ವಜನಿಕರು ಮನವಿ ಮಾಡಿದರು.

ಮೇಲಿನ ಎಲ್ಲಾ ಅಂಶಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನೆಗಳೊಂದಿಗೆ ಈ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

AE

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ: 20 ಗಂಗಾನಗರ

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ನಂ: 20 ಗಂಗಾನಗರ

ಸಹಾಯಕ ಕಾರ್ಯಪಾಲಕ ಅಭಿಯಂತರರು
ಘನತ್ಯಾಜ್ಯ ನಿರ್ವಹಣೆ,
ಶಾಂತಿನಗರ ವಿಭಾಗ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ